ಮಾಡಿ, ಉಳಿದ ಹಣ ಬಿಡುಗಡೆ ಮಾಡದಿರಲು ಹಾಗೂ ವಿಳಂಬವಾಗಿರಲು ಕಾರಣವೇನು;

ಇ) ಕ್ಷೇತ್ರದ ಅಭಿವೃದ್ಧಿಗೆ ಅನುಕೂಲವಾಗುವಂತೆ ಉಳಿಕೆ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?

ಡಾ॥ ವಿ.ಎಸ್. ಆಚಾರ್ಯ (ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು) :

ಅ) ಹೌದು.

ಆ) 2010–11ನೇ ಸಾಲಿನಲ್ಲಿ ಪ್ರತಿ ಶಾಸಕರಿಗೆ ಮೊದಲನೇ ಕಂತಾಗಿ ದಿನಾಂಕ: 21–04–2010ರಂದು ರೂ. 22.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ/ತಾಲ್ಲೂಕು ಪಂಚಾಯತ್ ಚುನಾವಣೆಗಳಿಂದ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಎರಡನೇ ಕಂತಿನ ಅನುದಾನ ಬಿಡುಗಡೆಯಲ್ಲಿ ವಿಳಂಬವಾಯಿತು. ಆದಾಗ್ಯೂ, ಉಳಿದ ಅನುದಾನವನ್ನು ಎರಡು ಕಂತುಗಳಲ್ಲಿ ದಿನಾಂಕ: 10–01–2010 ರಂದು ರೂ. 27.78 ಲಕ್ಷಗಳು ಮತ್ತು 26–02–2011ರಂದು ರೂ.50.00 ಲಕ್ಷಗಳು ಬಿಡುಗಡೆಗೊಳಿಸಲಾಗಿದೆ.

ಇ) ಅನ್ವಯಿಸುವುದಿಲ್ಲ.

ಪಾಲಿಟೆಕ್ನಿಕ್ ಮತ್ತು ಪದವಿ ಕಾಲೇಜುಗಳಿಗೆ ಕಟ್ಟಡಗಳ ಮಂಜೂರಾತಿ

538 (888) **ಶ್ರೀ ಸಿದ್ದು ಸವದಿ :** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದ ರಬಕವಿ, ಬನಹಟ್ಟಿ ನಗರದಲ್ಲಿ ಹೊಸದಾಗಿ ಡಿಪ್ಲೋಮಾ (ಪಾಲಿಟೆಕ್ನಿಕ್) ಮತ್ತು ಪದವಿ ಕಾಲೇಜುಗಳನ್ನು ಪ್ರಾರಂಭಿಸಲಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ; ಎರಡೂ ಕಾಲೇಜು ಗಳಿಗೆ ಕಟ್ಟಡಗಳನ್ನು ಇಲ್ಲಿಯವರೆಗೆ ಏಕೆ ಮಂಜೂರಾತಿ ನೀಡಿರುವುದಿಲ್ಲ;

ಇ) ಈ ಕಟ್ಟಡದ ಕೊರತೆಯಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕಟ್ಟಡಗಳಿಗೆ ಮಂಜೂರಾತಿ ನೀಡಲಾಗುವುದು;

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) 2009–10ನೇ ಸಾಲಿನಿಂದ ಈ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸ ಲಾಗಿದೆ. ಈ ಸಂಸ್ಥೆ ಕಟ್ಟಡ ನಿರ್ಮಾಣ ಕಾರ್ಯವನ್ನು ಈಗಾಗಲೇ ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು ಇದರ ಪ್ಲಾನ್ ಮತ್ತು ಅಂದಾಜು ಪಟ್ಟಿಯು ತಯಾರಿಸುವ ಹಂತದಲ್ಲಿರುತ್ತದೆ.

2009–10ನೇ ವರ್ಷದಿಂದ ಪದವಿ ಕಾಲೇಜನ್ನು ಪ್ರಾರಂಭಿಸ ಲಾಗಿದ್ದು ಸದರಿ ಕಾಲೇಜಿಗೆ ನಿವೇಶನ ಇದುವರೆಗೂ ಯಾವುದೇ ಮೂಲ ದಿಂದ ದೊರಕದೆ ಇರುವುದರಿಂದ ಕಟ್ಟಡ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ನೀಡಿರುವುದಿಲ್ಲ.

ಇ) ಬಂದಿದೆ.

ಆದುದರಿಂದ ಪಾಲಿಟೆಕ್ನಿಕ್‌ನ್ನು ಎಂ.ವಿ.ಪಾಠನ್ ಶಾಲೆ, ಹಳೆಯ ಬಸ್‌ಸ್ಟಾಂಡ್ ಹತ್ತಿರ, ರಬಕವಿ ಇಲ್ಲಿ ನಡೆಸಲು ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಅಂದರೆ 2011–12ನೇ ಸಾಲಿನಲ್ಲಿ ಕಟ್ಟಡವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಪದವಿ ಕಾಲೇಜಿಗೆ ಸೂಕ್ತ ನಿವೇಶನ ದೊರೆತ ಕೂಡಲೇ ಕಟ್ಟಡ ನಿರ್ಮಾಣ ಕೈಗೊಳ್ಳಲಾಗುವುದು.

ತೇರದಾಳ ಕ್ಷೇತ್ರದಲ್ಲಿ ಪ್ರೌಢಶಾಲೆಗಳಿಗೆ ಆಂಗ್ಲ ಶಿಕ್ಷಕರ ನೇಮಕ

539 (889) ಶ್ರೀ ಸಿದ್ದು ಸವದಿ (ತೇರದಾಳ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದ ಬಹುತೇಕ ಸರ್ಕಾರದ ಪ್ರೌಢಶಾಲೆ ಗಳಲ್ಲಿ ಆಂಗ್ಲ ಶಿಕ್ಷಕರ ಕೊರತೆಯಿದ್ದು, ಆ ಹುದ್ದೆಯ ಮಂಜೂರಾತಿಯೂ ಇಲ್ಲದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಹುದ್ದೆಯನ್ನು ಮಂಜೂರು ಮಾಡಿ ಭರ್ತಿ ಮಾಡಲು ಇರುವ ತೊಂದರೆಗಳೇನು? ಯಾವಾಗ ಮಂಜೂರಾತಿ ನೀಡಲಾಗುವುದು?